**ಸಾಕ್ಷಿಗೆ ದಿನಾಂಕಃ 23.07.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರಃ ಶ್ರೀ.ಹೆಚ್ ಎ ಎಸ್ ವಕೀಲರಿಂದ ಃ**

ವಾದಿ ನನ್ನ ಅಣ್ಣ. ನಾನು ಮತ್ತು ವಾದಿ ತುಂಬಾ ಆತ್ಮೀಯರು ಎಂದರೆ ಸರಿಯಲ್ಲ. ವಾದಿ, ನಾನು , ಪ್ರತಿವಾದಿ ಎಲ್ಲರೂ ಆತ್ಮೀಯರೇ ಎಂದು ನುಡಿಯುತ್ತಾರೆ. ಆಸ್ತಿಯ ಬಗ್ಗೆ ಕರಾರು ಮಾಡುವ ಸಮಯದಲ್ಲಿ ಸದರಿ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ವಿಚಾರಣೆ ಮಾಡುತ್ತೇನೆ. ನಿಪಿ-25 ರಲ್ಲಿ ಆಸ್ತಿ ಹೇಗೆ ಬಂದಿರುತ್ತದೆ ಎಂದು ತೋರಿಸಿರುವುದಿಲ್ಲ. ಸದರಿ ನಿಪಿ-25 ರಲ್ಲಿ ತೋರಿಸಿರುವ ಆಸ್ತಿ ವಾದಿಗೆ ಹೇಗೆ ಬಂದಿರುತ್ತದೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ನಿಪಿ-25 ರ ಆಸ್ತಿಗೆ ದಾಖಲೆ ಇರುವುದಿಲ್ಲ. ಸದರಿ ಆಸ್ತಿಗೆ ನಕಾಶೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಆಸ್ತಿಯ ಪಕ್ಕದಲ್ಲಿ ನಿಪಿ-25 ರಲ್ಲಿ ತೋರಿಸಿರುವ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಆಸ್ತಿಯ ದಕ್ಷಿಣಕ್ಕೆ ರಸ್ತೆ ನಂತರ ನಿಪಿ-25 ರಲ್ಲಿ ತೋರಿಸಿರುವ ಆಸ್ತಿ ಬರುತ್ತದೆ.

ಸದರಿ ನಿಪಿ-25 ಶಿವಮೊಗ್ಗದಲ್ಲಿ ಮಾಡಿಸಿರುತ್ತೇವೆ. ಸದರಿ ನಿಪಿ-25 ಕ್ಕೆ ಛಾಪಾ ಕಾಗದವನ್ನು ಯಾರು ಖರೀದಿ ಮಾಡಿರುತ್ತಾರೆ ಹಾಗೂ ಎಲ್ಲಿ ಖರೀದಿ ಮಾಡಿರುತ್ತಾರೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ನಿಪಿ-25 ನ್ನು ಶಿವಮೊಗ್ಗದಲ್ಲಿ ಎಲ್ಲಿ ತಯಾರು ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ನಿಪಿ-25 ಶಿವಮೊಗ್ಗದಲ್ಲಿ ಖರೀದಿ ಮಾಡಿದ್ದು ಯಾರು ಖರೀದಿ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸದರಿ ಕಾಗದ ಪತ್ರವನ್ನು ಖರೀದಿ ಮಾಡುವಾಗ ನಾನು, ಪುಟ್ಟ ಸ್ವಾಮಿ , ತಿಮ್ಮಣ್ಣ ಹಾಗೂ ರವಿಕುಮಾರ್ ರವರು ಇದ್ದರು. ನಿಪಿ-25 ಕ್ಕೆ ನಾನು, ಪುಟ್ಟ ಸ್ವಾಮಿ , ತಿಮ್ಮಣ್ಣ ಹಾಗೂ ರವಿಕುಮಾರ್ ರವರು ಸಹಿಗಳನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಸದರಿ ಸಹಿಗಳನ್ನು ಪುಟ್ಟ ಸ್ವಾಮಿ , ತಿಮ್ಮಣ್ಣ ಹಾಗೂ ರವಿಕುಮಾರ್ ರವರು ನನ್ನ ಎದುರುಗಡೆ ನಿಪಿ-25 ಕ್ಕೆ ಮಾಡಿರುತ್ತಾರೆ. ನಿಪಿ-25 ಕ್ಕೆ ವಾದಿ ಮತ್ತು ನಾನು ಎಷ್ಟು ಎಷ್ಟು ಸಹಿಗಳನ್ನು ಮಾಡಿರುತ್ತೇವೆ ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು 1-2 ಸಹಿಗಳನ್ನು ಮಾಡಿರಬಹುದು. ನಿಪಿ-25 ನ್ನು ನಾವು ನೋಟರಿ ಮಾಡಿಸಿರುವುದಿಲ್ಲ.

ನಿಪಿ-25 ನ್ನು ವಾದಿ ಮತ್ತು ನಾನು ಸೃಷ್ಟಿ ಮಾಡಿರುತ್ತೇಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ತಿಳಿಸಿರುವಂತೆ ವಾದಿಗೆ 4 ಎಕರೆ ಜಮೀನು ಬಂದಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಹಿಸ್ಸಾಪತ್ರದಲ್ಲಿ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಹೆಸರಿನಲ್ಲಿ ದಾವಾ ಆಸ್ತಿ 4 ಎಕರೆ ಇದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ದಾವೆ ತರುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ ಮನೆ ಇದೆ ಎಂದು ತೋರಿಸಲು ದಾಖಲೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಅದು ನಮ್ಮ ಜಮೀನಿನ ಪಕ್ಕದಲ್ಲಿರುವುದು ನನಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯಲ್ಲಿರುವ ಮನೆ ನನ್ನ ದೊಡ್ಡಪ್ಪನ ಹೆಸರಿನಲ್ಲಿ ಇರುತ್ತದೆ. ಅವರೇ ಕಟ್ಟಿರುತ್ತಾರೆ. ಈ ಸಂಬಂಧ ನಾನು ಪಂಚಾಯ್ತಿಯಲ್ಲಿ ಅಸೆಸ್ಮೆಂಟ್ ನೋಡಿರುತ್ತೇನೆ. ಅಸೆಸ್ಮೆಂಟ್ ನಂಬರ್ ಈಗ ನನಗೆ ನೆನಪಿರುವುದಿಲ್ಲ.

2009-10 ರಲ್ಲಿ ಹೇಳಲಾದ ನಮ್ಮ ಚಿಕ್ಕಪ್ಪ ಕಟ್ಟಿರುವ ಮನೆಯ ನಾಟಾಗಳನ್ನು ವಾದಿ ಅರಣ್ಯ ಅಧಿಕಾರಿಗಳಿಂದ ಅನುಮತಿ ಪಡೆದುಕೊಂಡು ತೆಗೆದುಕೊಂಡು ಹೋಗಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ಹಳೆ ಮನೆಯನ್ನು ಕಿತ್ತು ಹಾಕಿ ಬೇರೆ ಮನೆಯನ್ನು ಅದೇ ಜಾಗದಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಳೆಯ ಮನೆ ಚೆಕ್ಕುಬಂಧಿ ಸುತ್ತಲೂ ವಾದಿ ಮತ್ತು ಪ್ರತಿವಾದಿ ಜಮೀನು ಬರುತ್ತದೆ. ಸದರಿ ಹಳೆ ಮನೆಯ ವಿಸ್ತೀರ್ಣ ನನಗೆ ಈಗ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಅದು ದೊಡ್ಡ ಮನೆಯಾಗಿದ್ದು 60-65 ಅಳತೆ ಇರಬಹುದು ಎಂದು ನುಡಿಯುತ್ತಾರೆ.

2020-21 ನೇ ಸಾಲಿನಲ್ಲಿ ಸದರಿ ಮನೆ ಯಾರ ಹೆಸರಿನಲ್ಲಿತ್ತು ಮತ್ತು ಯಾರು ಅದಕ್ಕೆ ಕಂದಾಯ ಕಟ್ಟುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗೆ ತಾಲ್ಲೂಕು ಕಚೇರಿಯಿಂದ 94(ಸಿ) ಅಡಿಯಲ್ಲಿ ಮನೆದಳ ಹಕ್ಕು ಪತ್ರವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಕ್ಕು ಪತ್ರ ನೀಡಿರುವ ಸ್ಥಳದಲ್ಲಿ ಈಗ ಪ್ರತಿವಾದಿ ಮನೆ ಕಟ್ಟಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಳೆ ಮನೆ ಜಾಗದಲ್ಲಿ ಮನೆ ಕಟ್ಟಿರುತ್ತಾರೆಂದು ನುಡಿಯುತ್ತಾರೆ. ಸಾಮಾನ್ಯವಾಗಿ 94(ಸಿ) ಅಡಿಯಲ್ಲಿ ಮನೆಗೆ ಸಾಗುವಳಿ ಚೀಟಿ ನೀಡಬೇಕಾದರೆ ಆರ್ ಐ , ವಿ ಐ, ತಹಶೀಲ್ದಾರ್ ಸ್ಥಳಕ್ಕೆ ಬಂದು ನಕಾಶೆ ಮಾಡಿ ನಂತರ ಸಾಗುವಳಿ ಚೀಟಿ ನೀಡುತ್ತಾರೆಂದರೆ ಸರಿ. ನಾನು ಮತ್ತು ವಾದಿ ಸೇರಿ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರತಿವಾದಿಗೆ

ಸಾಗುವಳಿ ಚೀಟಿ ಇದ್ದರೂ ಕೂಡ ಅವನ ಮನೆಯನ್ನು ಲಪಟಾಯಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

ಪ್ರಸ್ತುತ ದಾವೆಯಲ್ಲಿ ವಾದಿಗೆ ಬಂದಿರುವ ಜಾಗವನ್ನು ಪ್ರತಿವಾದಿ ಕ್ಲೇಮು ಮಾಡುತ್ತಿದ್ದಾನೆಂದು ದಾವೆ ತಂದಿರುತ್ತಾನೆ. ನಾನು ವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಃಃ ಮರು ವಿಚಾರಣೆ ಇಲ್ಲಃಃ

**(ದಿನಾಂಕಃ 23.07.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ